## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ವಾರ್ಡ್ ಸದಸ್ಯರ ಸಮಿತಿ ವಾರ್ಡ್ ಹಳೆ ಸಂಖ್ಯೆ: 89 – ಹೊಸ ಸಂಖ್ಯೆ: 179 ಜೋಗುಪಾಳ್ಯ ವಾರ್ಡಿನ ದಿನಾಂಕ: 31-12-2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/ 2020-21/21-09-2020 ರ ಆದೇಶದಂತೆ ದಿನಾಂಕ: 31-12-2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಕೇನೋಪಿಯಾ ಹೋಟೆಲ್, 2ನೇ ಮಹಡಿ, ಪಿಯು ಕಟ್ಟಡ, ಎಂ..ಜಿ. ರಸ್ತೆ. ಬೆಂಗಳೂರು-560001** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

ಮಾನ್ಯ ಶ್ರೀ.ಎನ್.ಎ. ಹ್ಯಾರೀಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯು ದಿನಾಂಕ: 31-12-2022 ರಂದು ನಡೆಯಿತು.

**ಸಭೆಗೆ ಹಾಜರಿದ್ದವರ ವಿವರಗಳು**

1. ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ, ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ),
2. ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3. ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ. ಆಶಾ ಅಲ್ವಿನ್, ಶ್ರೀ. ರಮೇಶ್ ರೆಡ್ಡಿ, ಶ್ರೀ. ಗಜಾರಾಜ್, ಶ್ರೀಮತಿ. ವಿಜಯಲಕ್ಷ್ಮಿ ಶ್ರೀ. ಉಮೇಶ್ ರವರು ಸಭೆಗೆ ಹಾಜರಿದ್ದರು.

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

### ವಾರ್ಡ್ ಕಮಿಟಿ ಸದಸ್ಯರು ಚರ್ಚಿಸಿದಂತಹ ವಿಷಯಗಳು ;-

1. ಶ್ರೀಮತಿ. ಆಶಾ ಅಲ್ವಿನ್ ವಾರ್ಡಿನ ಸಮಿತಿ ಸದಸ್ಯರು ರವರು ಮಾತನಾಡುತ್ತಾ ಮೋಟಪ್ಪನ ಪಾಳ್ಯ ಭವಾನಿ ಶಂಕರ್ ರಸ್ತೆಯಲ್ಲಿರುವ ಎರಡು ಬೋರ್‌ವೆಲ್‌ಗಳು ಕೆಟ್ಟು ಹೋಗಿದ್ದು ಅಲ್ಲಿಯ ನಾಗರೀಕರಿಗೆ ತೊಂದರೆಯಾಗುತ್ತಿದ್ದು ಕೂಡಲೇ ದುರಸ್ಥಿಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ. – ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB ಕ್ರಮ ತೆಗೆದುಕೊಳ್ಳುವುದು.

2. ಶ್ರೀ. ಅಲ್ವಿನ್ ವಾರ್ಡಿನ ನಾಗರೀಕರು ಮಾತನಾಡುತ್ತಾ ಇಂದಿರಾನಗರದ ಡಬಲ್ ರೋಡಿನಲ್ಲಿ ರಸ್ತೆಯ ಎರಡು ಬದಿಯಲ್ಲಿಯೂ ಸಹ ವಾಹನಗಳನ್ನು ನಿಲ್ಲಿಸುತ್ತಾ ಹಾಗೂ ಪಾದಚಾರಿ ರಸ್ತೆಯಲ್ಲಿಯೂ ಸಹಾ ವಾಹನಗಳನ್ನು ನಿಲ್ಲಿಸುತ್ತಾ ಅಲ್ಲಿಯ ನಾಗರೀಕರಿಗೆ ಪಾದಚಾರಿ ರಸ್ತೆಯಲ್ಲಿ ಓಡಾಡಲು ಕಷ್ಟಕರವಾಗಿರುತ್ತದೆ ಹಾಗೂ ರಸ್ತೆಯಲ್ಲಿಯೂ ಸಹ ವಾಹನಗಳು ಸಂಚರಿಸಲು ಕಷ್ಟವಾಗುತ್ತಿದೆ ಕೂಡಲೇ ಸುಗಮವಾಗಿ ವಾಹನಗಳು ಸಂಚರಿಸಲು ಅನುವುಮಾಡಿಕೊಡಬೇಕೆಂದು ಕೇಳಿಕೊಂಡಿರುತ್ತಾರೆ – ಆರಕ್ಷಕ ಅಧಿಕಾರಿ ಹಾಗೂ ಸಿಬ್ಬಂಧಿಯವರು ಕ್ರಮ ತೆಗೆದುಕೊಳ್ಳುವುದು.

3. ಶ್ರೀ. ಅಲ್ವಿನ್ ವಾರ್ಡಿನ ನಾಗರೀಕರು ಮಾತನಾಡುತ್ತಾ ವಾರ್ಡಿನಲ್ಲಿರುವ ಅಪ್ಪಾರೆಡ್ಡಿ ಪಾಳ್ಯದ ಆಂಜನೇಯ ದೇವಸ್ಥಾನದ ಪಕ್ಕದ ರಸ್ತೆಯು ಹದಗೆಟ್ಟಿದ್ದು ಇದರಿಂದ ನಾಗರೀಕರು ಹಾಗೂ ವಾಹನಗಳು ಸಂಚರಿಸಲು ಕಷ್ಟಕರವಾಗಿರುತ್ತದೆ ಕೂಡಲೇ ರಸ್ತೆ ದುರಸ್ಥಿಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.– ಸಹಾಯಕ ಕಾರ್ಯಪಾಲಕ ಅಭಿಯಂತರರು (ಕಾಮಗಾರಿ) ಕ್ರಮಕೈಗೊಳ್ಳುವುದು.

4. ಶ್ರೀ. ಅಲ್ವಿನ್ ವಾರ್ಡಿನ ನಾಗರೀಕರು ಮಾತನಾಡುತ್ತಾ ಅಪ್ಪಾರೆಡ್ಡಿ ಪಾಳ್ಯದಲ್ಲಿರುವ ಸಮುದಾಯ ಭವನವು ಪ್ರಸ್ತುತ ಗೋಡನ್‌ಆಗಿ ಮಾರ್ಪಟಿದ್ದು ಇದರಿಂದ ಸಾರ್ವಜನಿಕರು ಸಮಾರಂಭ ಹಾಗೂ ಇತರ ಕಾರ್ಯಕ್ರಮವನ್ನು ನಡೆಸಲು ಸಮುದಾಯ ಭವನವನ್ನು ಉಪಯೋಗಿಸಲಾಗದ ಸ್ಥಿತಿಯಲ್ಲಿರುತ್ತದೆ ಕೂಡಲೇ ಸಮುದಾಯ ಭವನವನ್ನು ದುರಸ್ಥಿಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.– ಸಹಾಯಕ ಕಾರ್ಯಪಾಲಕ ಅಭಿಯಂತರರು (ಕಾಮಗಾರಿ) ಕ್ರಮಕೈಗೊಳ್ಳುವುದು.

5. ವಾರ್ಡಿನ ಸಮಿತಿ ಸದಸ್ಯರಾದ ಶ್ರೀ. ರಮೇಶ್ ರೆಡ್ಡಿ ರವರು ಮಾತನಾಡುತ್ತಾ ವಾರ್ಡಿನಲ್ಲಿರುವ 12ನೇ ಬೀದಿ 13ನೇ ಬೀದಿ ಹಾಗೂ 5ನೇ ಬೀದಿ ರಸ್ತೆಗಳು

ಹದಗೆಟ್ಟಿದ್ದು ನಾಗರೀಕರು ಓಡಾಡಲು ಹಾಗೂ ವಾಹನಗಳು ಸಂಚರಿಸಲು ಕಷ್ಟಕರವಾಗಿದ್ದು ಕೂಡಲೇ ಈ ರಸ್ತೆಗಳಿಗೆ ಕಾಂಕ್ರೀಟ್ ಹಾಕಬೇಕೆಂದು ಕೋರಿರುತ್ತಾರೆ.- ಸಹಾಯಕ ಕಾರ್ಯಪಾಲಕ ಅಭಿಯಂತರರು (ಕಾಮಗಾರಿ) ಕ್ರಮಕ್ಕೈಗೊಳ್ಳುವುದು.

ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4. ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5. ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6. ಕಛೇರಿ ಪ್ರತಿ